**ಶ್ರೀ. ಹನುಮಂತ ರುದ್ರಪ್ಪ ನಿರಾಣಿ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಕರ್ನಾಟಕ ವಿಧಾನ ಪರಿಷತ್ತು ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರ:**

**ಕೇಂದ್ರ ಸರ್ಕಾರವು ಯೂರಿಯಾ ಮತ್ತು ಡಿ.ಎ.ಪಿ ರಸಗೊಬ್ಬರವು ನಿರೀಕ್ಷೆಗೂ ಮೀರಿ ಪೂರೈಸಿದರೂ ಸಹ ರಾಜ್ಯ ಸರ್ಕಾರವು ರೈತರಿಗೆ ಸಮರ್ಪಕವಾಗಿ ವಿತರಣೆ ಮಾಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ.**

**ಈ ವರ್ಷ ರಾಜ್ಯದೆಲ್ಲೆಡೆ ಮುಂಗಾರು ಮಳೆ ಬೇಗ ಆರಂಭವಾಗಿ ಏಕಕಾಲದಲ್ಲಿ ಎಲ್ಲೆಡೆ ಬಿತ್ತನೆ ಚಟುವಟಿಕೆಗಳು ಆರಂಭಿಸಿರುವ ನಮ್ಮ ರೈತರಿಗೆ ರಾಜ್ಯ ಸರ್ಕಾರವು ಅಗತ್ಯವಿರುವ ಯೂರಿಯಾ ಮತ್ತು ಬೀಜಗಳ ಪ್ರಮಾಣವನ್ನು ಮುಂಚಿತವಾಗಿಯೇ ಅಂದಾಜು ಮಾಡಿ ಗೋದಾಮುಗಳಲ್ಲಿ ಸರಿಯಾಗಿ ದಾಸ್ತಾನು ಮಾಡಿ ವಿತರಣೆ ಮಾಡದೇ ನಿರ್ಲಕ್ಷ್ಯ ಮಾಡಿರುವುದು ಖಂಡನೀಯ ವಿಷಯವಾಗಿದೆ.**

**ರೈತನೇ ರಾಷ್ಟ್ರದ ಬೆನ್ನೆಲುಬು, ರಾಷ್ಟ್ರಕ್ಕೆ ಅನ್ನ ನೀಡುವ ರೈತನಿಗೆ ಸರಿಯಾದ ಸಮಯಕ್ಕೆ ರಸಗೊಬ್ಬರ ಮತ್ತು ಉತ್ತಮ ಗುಣಮಟ್ಟದ ಬೀಜಗಳನ್ನು ಸರ್ಕಾರವು ಪೂರೈಸಿದರೆ ರೈತ ಈ ನಾಡಿಗೆ ಬೇಕಾಗುವಷ್ಟು ದವಸ ದಾನ್ಯಗಳನ್ನು ಬೆಳೆಯುವ ಸಾಮರ್ಥ್ಯ ನಮ್ಮ ರೈತರಿಗಿದೆ ಹಾಗೂ "ಒಕ್ಕಲಿಗ ಒಕ್ಕದಿದ್ದರೇ ಬಿಕ್ಕುವುದು ಜಗವೆಲ್ಲ" ಎಂಬ ಹಿರಿಯರ ನಾಡನುಡಿಯನ್ನು ನಾವೆಲ್ಲರೂ ಸ್ಮರಿಸಿಕೊಳ್ಳಬೇಕಾಗಿದೆ.**

**ಇಂದು ರೈತನಿಗೆ ಸಕಾಲದಲ್ಲಿ ಗೊಬ್ಬರ ಸಿಗದೇ ಪರದಾಡುವ ಪರಿಸ್ಥಿತಿ ಎಲ್ಲೆಡೆ ಉದ್ಭವವಾಗಿದೆ, ಸರಿಯಾದ ಸಮಯದಲ್ಲಿ ಬೀಜ ಮತ್ತು ಗೊಬ್ಬರ ಸಿಗದೇ ರೈತರ ಆರ್ಥಿಕ ವರಮಾನ ಕುಂಠಿತಗೊಂಡಿದೆ.**

**ಆದ್ದರಿಂದ ರಾಜ್ಯ ಸರ್ಕಾರವು ತಕ್ಷಣವೇ ಎಚ್ಚೆತ್ತುಕೊಂಡು ಗೊಬ್ಬರದ ಸಮಸ್ಯೆಯನ್ನು ತಡ ಮಾಡದೇ ಈ ಕೂಡಲೇ ನಮ್ಮ ರೈತರಿಗೆ ಸಮರ್ಪಕವಾಗಿ ರಸಗೊಬ್ಬರವನ್ನು ಮತ್ತು ಉತ್ತಮ ಗುಣಮಟ್ಟದ ಬೀಜಗಳನ್ನು ಪೂರೈಸುವಂತೆ ತಮ್ಮ ಮೂಲಕ ಕೃಷಿ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.**

*********************

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ವಿಷಯವಾದ ಕೇಂದ್ರ ಸರ್ಕಾರವು ಸಾಕಷ್ಟು ಯೂರಿಯಾ ಮತ್ತು ಡಿ.ಎ.ಪಿ ರಸಗೊಬ್ಬರವನ್ನು ಪೂರೈಸಿದ್ದು, ರಾಜ್ಯ ಸರ್ಕಾರವು ರೈತರಿಗೆ ಸಮರ್ಪಕವಾಗಿ ಪೂರೈಸುವ ಕುರಿತು ಈ ಕೆಳಕಂಡಂತೆ ಮಾಹಿತಿಯನ್ನು ಒದಗಿಸಲಾಗಿದೆ.

**ರಸಗೊಬ್ಬರ:**

ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಡಿ.ಎ.ಪಿ. ಮತ್ತು ಯೂರಿಯಾ ರಸಗೊಬ್ಬರದ ಸಮಸ್ಯೆ ಉಂಟಾಗಲು ಕಾರಣಗಳು ಕೆಳಕಂಡಂತಿವೆ:

- ರಾಜ್ಯದಲ್ಲಿ ಮುಂಗಾರು ಹಂಗಾಮಿನಲ್ಲಿ ಮುಂಚಿತವಾಗಿ ಉತ್ತಮವಾಗಿ ಮಳೆಯಾಗಿದ್ದು, ಸಾಮಾನ್ಯ ಅವಧಿಗಿಂತ ಮುಂಚೆ ಬಿತ್ತನೆ ಪ್ರಾರಂಭವಾಗಿರುತ್ತದೆ.

- ಹೆಚ್ಚು ರಸಗೊಬ್ಬರ ಅವಶ್ಯವಿರುವ ಮುಸುಕಿನ ಜೋಳದ ವಿಸ್ತೀರ್ಣವು ಗಣನೀಯವಾಗಿ ಹೆಚ್ಚಳವಾಗಿರುತ್ತದೆ (ಅಂದಾಜು 2.00ಲಕ್ಷ ಹೆಕ್ಟೇರ್)
- ಅಂದಾಜು 13,000 ಹೆಕ್ಟೇರ್ ಪ್ರದೇಶದಲ್ಲಿ ಮರುಬಿತ್ತನೆ ಕೈಗೊಳ್ಳಲಾಗಿರುತ್ತದೆ.
- ಪ್ರಮುಖ ಜಲಾಶಯಗಳಿಂದ (ತುಂಗಭದ್ರಾ, ಕೃಷ್ಣಾ, ಕಾವೇರಿ ಇತ್ಯಾದಿ) ಅವಧಿಗಿಂತ ಮುಂಚಿತವಾಗಿ ಅಚ್ಚುಕಟ್ಟು ಪ್ರದೇಶಗಳಿಗೆ ನೀರನ್ನು ಬಿಟ್ಟಿರುವುದರಿಂದ ಮುಂಚಿತವಾಗಿ ನಾಟಿ ಕೈಗೊಳ್ಳಲಾಗಿರುತ್ತದೆ.
- ಕೇಂದ್ರ ಸರ್ಕಾರದಿಂದ ಪ್ರತಿ ಮಾಹೆಯ ಬೇಡಿಕೆ/ಹಂಚಿಕೆಗನುಗುಣವಾಗಿ ರಸಗೊಬ್ಬರಗಳು ಸರಬರಾಜಾಗಿರುವುದಿಲ್ಲ.

ರಾಜ್ಯಕ್ಕೆ ಪ್ರಸಕ್ತ ಮುಂಗಾರು ಹಂಗಾಮಿಗೆ ಆವರಿಸಬಹುದಾದ ಬೆಳೆಗಳ ವಿಸ್ತೀರ್ಣವನ್ನು ವಾಡಿಕೆಯಂತೆ ಅಂದಾಜಿಸಿ, 12.95 ಲಕ್ಷ ಮೆ.ಟನ್ ಯೂರಿಯಾ ಮತ್ತು 4.15 ಲಕ್ಷ ಮೆ.ಟನ್ ಡಿ.ಎ.ಪಿ ರಸಗೊಬ್ಬರಕ್ಕೆ ಕೇಂದ್ರ ಸರ್ಕಾರಕ್ಕೆ ಬೇಡಿಕೆಯನ್ನು ಸಲ್ಲಿಸಲಾಗಿತ್ತು. ಇದಕ್ಕೆ ಪೂರಕವಾಗಿ ಕೇಂದ್ರ ಸರ್ಕಾರದಿಂದ 11.17 ಲಕ್ಷ ಮೆ.ಟನ್ ಯೂರಿಯಾ ಮತ್ತು 4.00 ಲಕ್ಷ ಮೆ.ಟನ್ ಡಿ.ಎ.ಪಿ ರಸಗೊಬ್ಬರವನ್ನು ಹಂಚಿಕೆ ಮಾಡಲಾಗಿರುತ್ತದೆ.

ಏಪ್ರಿಲ್ ಮಾಹೆಯಿಂದ ಜುಲೈ-2025ರ ಮಾಹೆಯವರೆಗೆ 6.82 ಲಕ್ಷ ಮೆ.ಟನ್ **ಯೂರಿಯಾ** ರಸಗೊಬ್ಬರದ ಹಂಚಿಕೆಗೆ, ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ 5.55 ಲಕ್ಷ ಮೆ.ಟನ್ ಸರಬರಾಜಾಗಿದ್ದು 1.27 ಲಕ್ಷ ಮೆ.ಟನ್ ಪ್ರಮಾಣದ ಯೂರಿಯಾ ರಸಗೊಬ್ಬರದ ಸರಬರಾಜಿನಲ್ಲಿ ಕೊರತೆಯಾಗಿರುತ್ತದೆ. ಆರಂಭಿಕ ಶಿಲ್ಕು 3.46 ಲಕ್ಷ ಮೆ.ಟನ್ ಸೇರಿ 7.90 ಲಕ್ಷ ಮೆ.ಟನ್ ಮಾರಾಟವಾಗಿ, 1.10 ಲಕ್ಷ ಮೆ.ಟನ್ ದಾಸ್ತಾನಿರುತ್ತದೆ.

ಆಗಸ್ಟ್-2025ರ ಮಾಹೆಗೆ 2.23 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಹಂಚಿಕೆಗೆ, ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ 0.67 ಲಕ್ಷ ಮೆ.ಟನ್ ಸರಬರಾಜಾಗಿದ್ದು, ಪ್ರಸ್ತುತ ಮಾಹೆಗೆ ಕೇಂದ್ರ ಸರ್ಕಾರದಿಂದ ಇನ್ನೂ 1.56 ಲಕ್ಷ ಮೆ.ಟನ್ ಸರಬರಾಜು ಬಾಕಿ ಇರುತ್ತದೆ.

ಒಟ್ಟಾರೆ ಏಪ್ರಿಲ್ ಮಾಹೆಯಿಂದ ಆಗಸ್ಟ್-2025 ಮಾಹೆಯ ಅಂತ್ಯದವರೆಗೆ 2.83 ಲಕ್ಷ ಮೆ.ಟನ್ ಯೂರಿಯಾ ರಸಗೊಬ್ಬರದ ಸರಬರಾಜಿಗೆ ಬಾಕಿ ಇರುತ್ತದೆ.

ಏಪ್ರಿಲ್ 2025 ರಿಂದ ಜುಲೈ-2025ರವರೆಗೆ 3.10 ಲಕ್ಷ ಮೆ.ಟನ್ **ಡಿ.ಎ.ಪಿ** ಹಂಚಿಕೆಗೆ, ಇಲ್ಲಿಯವರೆಗೆ 2.39 ಲಕ್ಷ ಮೆ.ಟನ್ ರಸಗೊಬ್ಬರ ಸರಬರಾಜಾಗಿದ್ದು, 0.71 ಲಕ್ಷ ಮೆ.ಟನ್ ರಸಗೊಬ್ಬರದ ಸರಬರಾಜಿಗೆ ಬಾಕಿ ಇರುತ್ತದೆ. ಆರಂಭಿಕ ಶಿಲ್ಕು-0.76 ಲಕ್ಷ ಮೆ.ಟನ್ ಸೇರಿ 2.49 ಲಕ್ಷ ಮೆ.ಟನ್ ಮಾರಾಟವಾಗಿ, 0.67 ಲಕ್ಷ ಮೆ.ಟನ್ ದಾಸ್ತಾನಿರುತ್ತದೆ.

ಆಗಸ್ಟ್-2025ರ ಮಾಹೆಗೆ 0.78 ಲಕ್ಷ ಮೆ.ಟನ್ ಡಿ.ಎ.ಪಿ ರಸಗೊಬ್ಬರದ ಹಂಚಿಕೆಗೆ, ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ 0.21 ಲಕ್ಷ ಮೆ.ಟನ್ ಸರಬರಾಜಾಗಿದ್ದು, ಪ್ರಸ್ತುತ ಮಾಹೆಗೆ ಕೇಂದ್ರ ಸರ್ಕಾರದಿಂದ ಇನ್ನೂ 0.57 ಲಕ್ಷ ಮೆ.ಟನ್ ಸರಬರಾಜು ಬಾಕಿ ಇರುತ್ತದೆ. ಡಿ.ಎ.ಪಿ ರಸಗೊಬ್ಬರ ಸರಬರಾಜು ಪ್ರಕ್ರಿಯೆ ಜಾರಿಯಲ್ಲಿದೆ.

ಒಟ್ಟಾರೆ ಏಪ್ರಿಲ್ ಮಾಹೆಯಿಂದ ಆಗಸ್ಟ್-2025 ಮಾಹೆಯ ಅಂತ್ಯದವರೆಗೆ 1.28 ಲಕ್ಷ ಮೆ.ಟನ್ ಡಿ.ಎ.ಪಿ. ರಸಗೊಬ್ಬರದ ಸರಬರಾಜಿಗೆ ಬಾಕಿ ಇರುತ್ತದೆ.

ಮೇ ಮತ್ತು ಜೂನ್ ಮಾಹೆಗಳಲ್ಲಿ ಬೇಡಿಕೆ ಅಥವಾ ಹಂಚಿಕೆಗೆ ಅನುಗುಣವಾಗಿ ಡಿ.ಎ.ಪಿ ರಸಗೊಬ್ಬರ ಸರಬರಾಜಾಗದ ಕಾರಣ ಮುಂಗಾರು ಬಿತ್ತನೆ ಸಮಯದಲ್ಲಿ ಕೆಲವು ಜಿಲ್ಲೆಗಳಲ್ಲಿ ಡಿ.ಎ.ಪಿ ರಸಗೊಬ್ಬರದ ಕೊರತೆ ಉಂಟಾಗಿತ್ತು. ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ

ಕಾಂಪ್ಲೆಕ್ಸ್ ರಸಗೊಬ್ಬರವನ್ನು ಬಳಸಲು ರೈತರಲ್ಲಿ ವ್ಯಾಪಕ ಪ್ರಚಾರವನ್ನು ನೀಡಿ ಡಿ.ಎ.ಪಿ ರಸಗೊಬ್ಬರದ ಕೊರತೆಯನ್ನು ನಿಭಾಯಿಸಲಾಗಿದೆ.

**ಕೇಂದ್ರ ಸರ್ಕಾರದಿಂದ ಹಂಚಿಕೆ ಪ್ರಮಾಣದಷ್ಟು ಯೂರಿಯಾ ಮತ್ತು ಡಿ.ಎ.ಪಿ. ರಸಗೊಬ್ಬರ ಪೂರೈಕೆಯಾಗದಿದ್ದರೂ ಸಹ ಸರಬರಾಜಾದ ಪ್ರಮಾಣವನ್ನು ಜಿಲ್ಲೆಗಳ ಬೇಡಿಕೆಯನ್ನು ಪ್ರತಿ ದಿನ ಪರಿಶೀಲಿಸಿ ಅವಶ್ಯವಿರುವ ಜಿಲ್ಲೆಗಳಿಗೆ ಸಮರ್ಪಕವಾಗಿ ವಿತರಣೆ ಮಾಡಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ.**

**ಬಿತ್ತನೆ ಬೀಜ:**

ರೈತರಿಗೆ ವಿವಿಧ ಬೆಳೆಗಳ ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು ಒದಗಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

- ರಾಜ್ಯದ ಎಲ್ಲಾ ವರ್ಗದ ರೈತರಿಗೆ ಗರಿಷ್ಠ 2 ಹೆಕ್ಟೇರ್ ಮಿತಿಯೊಳಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ಸರಬರಾಜು ಮಾಡಲು 'ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ' ಯೋಜನೆಯಡಿ "ಬೀಜಗಳ ಪೂರೈಕೆ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.
- ರೈತ ಸಂಪರ್ಕ ಕೇಂದ್ರಗಳು ಹಾಗೂ ಗುರುತಿಸಿದ ಮಾರಾಟ ಕೇಂದ್ರಗಳ ಮುಖಾಂತರ ಸಕಾಲದಲ್ಲಿ ಬಿತ್ತನೆ ಬೀಜ ಸರಬರಾಜು ಮಾಡಲು ಹಾಗೂ ಸಮೀಪದಲ್ಲಿಯೇ ಬಿತ್ತನೆ ಬೀಜಗಳನ್ನು ದೊರಕಿಸುವ ಸಲುವಾಗಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಆಯ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕವು ವಿತರಣೆಗೆ ವ್ಯವಸ್ಥೆ ಮಾಡಲಾಗಿದೆ.
- ರೈತರಿಗೆ ಜೋಳ, ಸಜ್ಜೆ, ಭತ್ತ, ರಾಗಿ ಗೋಧಿ, ಉದ್ದು, ಹೆಸರು, ಅಲಸಂದೆ, ಮೆಕ್ಕೆಜೋಳ, ತೊಗರಿ. ನೆಲಗಡಲೆ, ತೃಣ ಧಾನ್ಯಗಳು, ಕಡಲೆ, ಕುಸುಬೆ, ಸೋಯಾಅವರೆ, ಅವರೆ ಮತ್ತು ಸೂರ್ಯಕಾಂತಿ ಬೆಳೆಗಳ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ ಸಕಾಲದಲ್ಲಿ ವಿತರಿಸಲಾಗುತ್ತದೆ.
- ರಾಜ್ಯ ಸರ್ಕಾರದ 'ಕೃಷಿ ಪರಿಕರಗಳು ಮತ್ತು ಗುಣಮಟ್ಟ ನಿಯಂತ್ರಣ' ಯೋಜನೆಯಡಿ "ಬೀಜಗಳ ಪೂರೈಕೆ" ಕಾರ್ಯಕ್ರಮದಲ್ಲಿ 2025 ರ ಮುಂಗಾರು ಹಂಗಾಮಿನಲ್ಲಿ ದಿನಾಂಕ 11.08.2025ರವರೆಗೆ 3.17ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ರಿಯಾಯಿತಿ ದರದಲ್ಲಿ 7.29 ಲಕ್ಷ ರೈತರಿಗೆ ವಿತರಿಸಲಾಗಿರುತ್ತದೆ. ಪ್ರಸ್ತುತ ಹಂಗಾಮಿನಲ್ಲಿ ಬೀಜ ವಿತರಣೆಯು ಪ್ರಗತಿಯಲ್ಲಿದ್ದು, ಯಾವುದೇ ಬಿತ್ತನೆ ಬೀಜದ ಕೊರತೆಯಿರುವುದಿಲ್ಲ.

**(ಎನ್. ಚೆಲುವರಾಯಸ್ವಾಮಿ)**
ಕೃಷಿ ಸಚಿವರು

ಸಂಖ್ಯೆ: AGRI/265/ACT/2025